ಬಂದಿದ್ದಾರೆಯೇ ಹೊರತು, ಸರೋಜಿನಿ ಮಹಿಷಿ ವರದಿಯನ್ನು ಜಾರಿ ಮಾಡುವುದರ ಬಗ್ಗೆ ಇವರಿಗೆ ಪ್ರಾಮಾಣಿಕತೆ, ನೈತಿಕತೆ ಇಲ್ಲ ಮತ್ತು ಕನ್ನಡಿಗರ ಬಗ್ಗೆ ಅಭಿಮಾನ ಇಲ್ಲವೆಂದು ಹೇಳುತ್ತಾ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

3. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: ಸಹಕಾರ ಸಂಘಗಳಲ್ಲಿ ಮೀಸಲಾತಿ ಜಾರಿಗೆ ತರುವ ಬಗ್ಗೆ ಹಾಗೂ ಬೇಡಿಕೆಗಳ ಮೇಲೆ ಮಾತನಾಡಲು ಹೆಚ್ಚು ಅವಕಾಶ ನೀಡುವ ಬಗ್ಗೆ.

ಶ್ರೀ ರಾಜೇಂದ್ರವರ್ಮ: ಮಾನ್ಯ ಅಧ್ಯಕ್ಷರೆ, ಸಹಕಾರ ಸಂಘದಲ್ಲಿ ಒಂದು ಮಾತು ನಮಗೆ ತಿಳಿಯುತ್ತಿಲ್ಲ. ಇವತ್ತು ಗ್ರಾಮಪಂಚಾಯ್ತಿಯಲ್ಲಿ, ಜಿಲ್ಲಾ ಪಂಚಾಯ್ತಿಯಲ್ಲಿ ತಾಲ್ಲೂಕು ಪಂಚಾಯ್ತಿಯಲ್ಲಿ ಎಸ್‌ಸಿ ರಿಸರ್ವೇಷನ್ ಅಳವಡಿಸಿದ್ದಾರೆ. ಆದರೆ ಈ ಸಹಕಾರ ಸಂಘದಲ್ಲಿ ಅದನ್ನು ಅಳವಡಿಸಿದ್ದಾರೋ ಇಲ್ಲವೋ ಎನ್ನುವುದನ್ನು ಮಾನ್ಯ ಸಚಿವರು ಸ್ಪಷ್ಟಪಡಿಸಬೇಕು. ಏಕೆಂದರೆ ಎಲ್ಲಾ ಕಡೆ ಕೂಡ ಎಲ್ಲಾ ಸ್ಥಾನಗಳಲ್ಲಿ ರಿಸರ್ವೇಷನ್ ಮಾಡಿದ್ದಾರೆ. ಈ ಕ್ಷೇತ್ರದಲ್ಲಿ ಏಕೆ ಇಲ್ಲ ಎನ್ನುವುದು ಬಹಳ ದೊಡ್ಡ ಸಮಸ್ಯೆ ದಲಿತರಿಗೆ ಕಾಡುತ್ತಿದೆ. ಅದಕ್ಕೋಸ್ಕರ ಸಹಕಾರ ಸಂಘದಲ್ಲಿ ಇಲ್ಲವೆಂದು ಹೇಳಿದರೆ ಅದನ್ನು ಮುಂದೆ ಬರುವಂತಹ ದಿನಗಳಲ್ಲಿ ಅಳವಡಿಸಬೇಕೆಂಬುದು ನನ್ನ ವಾದ. ರಿಸರ್ವೇಷನ್ ಕೊಡಬೇಕು ಆ ಸಹಕಾರ ರಂಗದಲ್ಲಿ ಎನ್ನುವುದು ನನ್ನ ಭಾವನೆ.

ಶ್ರೀ ಹೆಚ್.ಡಿ.ಬಸವರಾಜ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ಈ ಸಹಕಾರ ಸಂಘದಲ್ಲಿ ವಿಚಾರದಲ್ಲಿ ಹೇಳುತ್ತಿದ್ದಾರೆ. ಅದೇರೀತಿ ಮೀಸಲಾತಿಯನ್ನು ಇವತ್ತು ಎಪಿಎಂಸಿ ನಲ್ಲಿ ಕೂಡ ಇಲ್ಲ. ಗ್ರಾಮ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ ಮತ್ತು ಜಿಲ್ಲಾ ಪಂಚಾಯ್ತಿನಲ್ಲಿ ಮೀಸಲಾತಿ ಇದೆ. ಇವರು ಎಪಿಎಂಸಿಯನ್ನು ಏಕೆ ಹೊರತುಪಡಿಸಿದ್ದಾರೆ? ಅಲ್ಲಿ ಅವರಿಗೆ ಅವಕಾಶ ಸಿಗುವುದು ಬೇಡ ಎಂದೇ? ಸರ್ಕಾರ ಎಪಿಎಂಸಿ ಯಲ್ಲಿ ಕೂಡ ಮೀಸಲಾತಿಯನ್ನು ತಂದು.....

(ಗೊಂದಲ)

ಅಧ್ಯಕ್ಷರು: ಆಯಿತು, ಈಗ ಅನೇಕ ಜನ ಮಾತನಾಡಿದಾಗ ಆ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮತ್ತೆ, ಮತ್ತೆ ನೀವು ನಿಂತುಕೊಂಡು ಏತಕ್ಕೆ ಮಾತನಾಡುತ್ತೀರಿ? ತಮ್ಮ ಭಾಷಣಗಳಲ್ಲಿ ಹೇಳಿದ್ದಾರೆ. ಅದಕ್ಕೆ ಮಾನ್ಯ ಸಚಿವರು ಉತ್ತರ ಕೊಡುತ್ತಾರೆ, ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ.ಬಸವರಾಜ್: ಮಾನ್ಯ ಅಧ್ಯಕ್ಷರೇ ಏಕೆ ತಮ್ಮ ಗಮನಕ್ಕೆ ತರುತ್ತಿದ್ದೇನೆ ಎಂದರೆ ಎಪಿಎಂಸಿ ನಲ್ಲಿ ಕೂಡ ಈ ಒಂದು ಮೀಸಲಾತಿ ಇಲ್ಲ.

ಅಧ್ಯಕ್ಷರು: ಈಗಾಗಲೇ ಸಮಯ 12.30 ಗಂಟೆಯಾಗಿದೆ. ಒಂದು ಗಂಟೆಗೆ ಚರ್ಚೆ ಮುಕ್ತಾಯವಾಗಬೇಕು. ಆದುದರಿಂದ ಎಲ್ಲಾ ಸದಸ್ಯರು ಸಹಕಾರ ಕೊಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ಹೆಚ್.ಡಿ.ಬಸವರಾಜ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸಮಾಜ ಕಲ್ಯಾಣ ಸಚಿವರು ಇದರ ಬಗ್ಗೆ ಗಂಭೀರವಾಗಿ ಯೋಚನೆ ಮಾಡಲಿ ಎಂದು ಹೇಳುತ್ತಿರುವುದು. ಎಪಿಎಂಸಿ ಯಲ್ಲಿ ಮೀಸಲಾತಿಯನ್ನು ತೆಗೆದುಕೊಂಡು ಬನ್ನಿ.

ಅಧ್ಯಕ್ಷರು: ಈಗ ಮಾನ್ಯ ರೆಡ್ಡಿಯವರೆ, ನೀವು 10 ನಿಮಿಷದಲ್ಲಿ ದಯಮಾಡಿ ಮುಗಿಸಬೇಕು. ಮಾನ್ಯ ಹೆಗ್ಗಡೆಯವರು 10 ನಿಮಿಷ, ಮಾನ್ಯ ಗೋವಿಂದ ಕಾರಜೋಳ ಅವರು 10 ನಿಮಿಷ ಪ್ರಸ್ತಾಪ ಮಾಡಿ ಒಂದು ಗಂಟೆಗೆ ಮುಗಿಸಿಕೊಟ್ಟು ಬಿಟ್ಟರೆ, 1 ರಿಂದ 2 ಗಂಟೆಗೆ ಉತ್ತರ ಹೇಳುತ್ತಾರೆ. ನಂತರ ಪ್ರಶ್ನೊತ್ತರ ಮತ್ತು ವಿಚಾರ ಇದನ್ನೆಲ್ಲಾ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಅರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ನನ್ನ ವಿನಂತಿ ಇಷ್ಟೆ, ತಾವು ಟೈಮ್‌ಫಿಕ್ಸ್ ಮಾಡಿದ್ದೀರಿ. ನಮಗೆ 79 ಜನರಿಗೆ ಎಷ್ಟು ಟೈಮ್ ಎಂದು ಹೇಳಬೇಕು. ಒಬ್ಬೊಬ್ಬರೆ ಆಯ್ಕೆಯಾದಂತಹವರಿಗೆ ಎಷ್ಟು ಸಮಯ ಎಂದು ಹೇಳಬೇಕು. ಏಕೆಂದರೆ ತಾವು ತಾರತಮ್ಯ ಮಾಡುವುದಕ್ಕೆ ಆಗುವುದಿಲ್ಲ. ನಾವು 79 ಜನರಿಗೆ ಅಷ್ಟೇ ಸಮಯವನ್ನು ನಿಗದಿ ಮಾಡಬೇಕು. ತಾವು ಯಾರಿಗೆ ಬೇಕಾದರೂ ಅವಕಾಶ ಕೊಡಿ. ನಾವು ನಮ್ಮ ಪಕ್ಷದಿಂದ 79 ಜನ ಶಾಸಕರು ಇದ್ದೇವೆ.

ಅಧ್ಯಕ್ಷರು: ಈಗ ಮಾನ್ಯ ಸಿ.ಎಂ.ಉದಾಸಿಯವರು 1 ಗಂಟೆ 10 ನಿಮಿಷ ಮಾತನಾಡಿದ್ದಾರೆ. ಹೆಚ್.ಡಿ.ಬಸವರಾಜ್ ಅವರು 45 ನಿಮಿಷ ಮಾತನಾಡಿದ್ದಾರೆ ಸಿ.ಟಿ.ರವಿಯವರು 20 ನಿಮಿಷ ಮಾತನಾಡಿದ್ದಾರೆ. ಯೋಗೀಶ್ ಭಟ್ಟರು 30 ನಿಮಿಷ ಮಾತನಾಡಿದ್ದಾರೆ ಪ್ರಭಾಕರ ಬಂಗೇರ ಅವರು 30 ನಿಮಿಷ ಮಾತನಾಡಿದ್ದಾರೆ. ನಾಗರಾಜ ಶೆಟ್ಟರು 15 ನಿಮಿಷ ಮಾತನಾಡಿದ್ದಾರೆ. ನಿಮ್ಮ ಕಡೆಯವರು ಮಾತನಾಡಿದ್ದಾರೆ.

ಶ್ರೀ ಅರಗ ಜ್ಞಾನೇಂದ್ರ: ಮಾತನಾಡಿದ್ದಾರೆ, ಅದೇ ರೀತಿ 79 ಜನಕ್ಕೆ ಬೇರೆಯವರು ಯಾರ್ಯಾರು ಎಷ್ಟೆಷ್ಟು ಸಮಯ ಮಾತನಾಡಿದ್ದಾರೆ, ಆ ಪ್ರಕಾರ ನಮ್ಮಲ್ಲಿ ಮಾತನಾಡುವವರು ತುಂಬಾ ಜನ ಇದ್ದಾರೆ, ಅವರಿಗೆ ನಿಗದಿ ಮಾಡಿ. ಇಲ್ಲವೆಂದರೆ ಪ್ರತಿ ಅಧಿವೇಶನದಲ್ಲೂ ನಮಗೆ ತೊಂದರೆ ಆಗುತ್ತಿದೆ. ನಮಗೆ ವಂಚನೆಯಾಗುತ್ತಿದೆ. ಇಲ್ಲಿ ಎದುರುಗಡೆ ಸಾಲಿನವರು ಮಾತನಾಡುತ್ತಾರೆ. ತೆಗೆದು ನೋಡಿ, ಈ ಕಡೆಯಿರುವವರು ಯಾರೂ ಕೂಡ ಬಾಯಿ ಬಿಡಲಿಕ್ಕೆ ಆಗುತ್ತಿಲ್ಲ.

ಅಧ್ಯಕ್ಷರು: ಹಾಗಾದರೆ ಮೊದಲನೆ ಸಾಲಿನಲ್ಲಿ ಕುಳಿತುಕೊಂಡಿದ್ದಾರಲ್ಲಾ, ಅವರು ಬಾಯಿ ಬಿಡುವ ಹಾಗೆ ಇಲ್ಲ.

(ಗೊಂದಲ)

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರು ಉದಾರವಾಗಿ ಸಮಯ ಕೊಡುವುದಕ್ಕೆ ಹೊರಟ್ಟಿದ್ದಾರೆ. ಏಕೆ ಸದ್ಯಕ್ಕೆ ದೂರವಾದ ಮಾತು ಹೇಳುತ್ತೀರಿ?

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ: ಒಂದು ರೀತಿಯಲ್ಲಿ ನಮ್ಮ ಪ್ರತಿಭೆಗಳು ಕಮರಿ ಹೋಗುತ್ತಿದೆ. ನಾವು ಅಧ್ಯಯನ ಮಾಡಿಕೊಂಡು ಬರುತ್ತೇವೆ. ಬಾಯಿ ಬಿಡುವುದಕ್ಕೆ ಆಗುವುದಿಲ್ಲ. ಏನು ಇದು?

ಅಧ್ಯಕ್ಷರು: ಈಗ ಕೇಳಿ, ಎಲ್ಲಾ ನಿಂತುಕೊಂಡು ಮಾತನಾಡಿದರೆ ಹೇಗೆ? ಈಗ ನೀವು ಹಿರಿಯ ಸದಸ್ಯರು. ಈಗ ಬೇರೆ ಬೇರೆ ಪಕ್ಷಗಳನ್ನು ಅವರು ಪ್ರತಿನಿಧಿಸುತ್ತಾರೆ. ಆದ್ದರಿಂದ ಅವರ ಪಕ್ಷದ ವ್ಯೂಸ್ ಏನಿದೆ ಅದನ್ನು ಎಲ್ಲಾ ಹೇಳಬೇಕಾಗುತ್ತದೆ. ಈಗ ಲೋಕಸಭೆಯಲ್ಲೂ ಈ ಸಂಪ್ರದಾಯ ಇದೆ. ಏನೆಂದರೆ ಒಬ್ಬರು ಸದಸ್ಯರು ಇದ್ದರೂ ಕೂಡ ಅವರಿಗೂ ಮಾತನಾಡುವುದಕ್ಕೆ ಸಮಯ ಕೊಡುವಂತಹ ಸಂಪ್ರದಾಯ ಇದೆ. ಆದರೆ ಅವರು ಗಂಟೆಗಟ್ಟಲೆ ಮಾತನಾಡುವ ಹಾಗೆ ಇಲ್ಲ. ಆದ್ದರಿಂದ ಸಂಪ್ರದಾಯ ಇದೆ. ಆ ಸಂಪ್ರದಾಯದ ಪ್ರಕಾರ ಕೊಡಬೇಕಾಗುತ್ತದೆ.

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ರೆಕಾರ್ಡ್ ತೆಗೆಸಿ ನೋಡಿ. ಮಾನ್ಯ ಜ್ಞಾನೇಂದ್ರ ಅವರು ಎಷ್ಟು ಸಲ ಎದ್ದುನಿಂತು ಕೊಂಡು ಹೇಳದೆ ಕೇಳದೆ ಮಾತನಾಡಿದ್ದಾರೆ. ತೆಗೆಸಿ ನೋಡಿ ರೆಕಾರ್ಡ್, ಇಲ್ಲಿ ಕುಳಿತಿದ್ದಾಗ ಹಾಗೆ ಮಾತನಾಡುತ್ತಿದ್ದರಾ?

(ಗೊಂದಲ)

ಶ್ರೀ ಹೆಚ್.ಡಿ.ಬಸವರಾಜ: ಮಾನ್ಯ ಅಧ್ಯಕ್ಷರೆ, ಎಲ್ಲರೂ ಮಾತನಾಡಲಿ, ಆದರೆ ಸಂಖ್ಯೆಗನುಗುಣವಾಗಿ, ನಮಗೆ ಹೆಚ್ಚಿನ ಸಮಯ ಕೊಡಿ ಎನ್ನುವುದರ ಬಗ್ಗೆ ಹೇಳುತ್ತಿದ್ದಾರೆ.

ಅಧ್ಯಕ್ಷರು: ಹೌದು ಕೊಟ್ಟಿದ್ದೀನಲ್ಲಾ, ಅದನ್ನು ಗಮನ ಇಟ್ಟುಕೊಂಡು ಕೊಡುತ್ತಿದ್ದೇನೆ, ಅವರಿಗೂ ಸಹ ವಿನಂತಿ ಮಾಡುತ್ತಿದ್ದೇನೆ.

ಶ್ರೀ ಅರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ನೀವು ಅವರಿಗೆ ಸಮಯ ಕೊಟ್ಟಿದ್ದು ತಪ್ಪು ಎಂದು ಖಂಡಿತ ನಾನು ಹೇಳುವುದಿಲ್ಲ.

(ಗೊಂದಲ)

ಅಧ್ಯಕ್ಷರು: ಮಾನ್ಯ ಜ್ಞಾನೇಂದ್ರರವರೇ, ನಾನು ಕೆಳಗಡೆ ಇಳಿದು ಬಂದು ನಿಮ್ಮ ತಲೆ ಮೇಲೆ ಹೊಡೆದು ಕೂರಿಸುವ ಅಧಿಕಾರ ಇದ್ದಿದ್ದರೆ ಆ ರೀತಿ ಮಾಡಬಹುದಾಗಿತ್ತು.

ಶ್ರೀ ಆರಗ ಜ್ಞಾನೇಂದ್ರ: ಅವರು ಎಷ್ಟೊತ್ತು ಬೇಕಾದರೂ ಮಾತನಾಡಲಿ, ಅವರು ಎರಡೆರಡು ಗಂಟೆ ಮಾತನಾಡುತ್ತಾರೆ. ನೀವು ನಮ್ಮ ಹಕ್ಕನ್ನು ಮೊಟಕುಗೊಳಿಸುತ್ತಿದ್ದೀರಲ್ಲಾ ನಮಗೆ ಏಕೆ ಮೊಟಕುಗೊಳುಸುತ್ತಿದ್ದೀರಿ? ಅವರು ಒಬ್ಬರು ಮಾತನಾಡುವಂತಹ ಸಮಯವನ್ನು ನಮ್ಮ 79 ಜನಕ್ಕೆ ಹಂಚಿ ಹಾಕಿ, ನಮಗೇನೂ ತೊಂದರೆ ಇಲ್ಲ. ನಮ್ಮ ಪ್ರತಿಭೆಗಳು ಕಮರಿ ಹೋಗುತ್ತಿವೆ. ನಮ್ಮನ್ನು ಆಯ್ಕೆ ಮಾಡಿ ಕಳುಹಿಸಿದಂತಹ ಜನಕ್ಕೆ ನಾವೇನು ಹೇಳಬೇಕು? ಹೌದಪ್ಪ, ನಮ್ಮ ಯಡಿಯೂರಪ್ಪನವರು, ನಮ್ಮ ಶೆಟ್ಟರು, ನಮ್ಮ ಕಾರಜೋಳರವರು ಮಾತನಾಡಿದರೆ ನಮ್ಮದೆಲ್ಲಾ ಪವರ್ ಆಫ್ ಅಟಾರ್ನಿ ಅವರಿಗೆ ಕೊಡಲಿಲ್ಲ. ನಮ್ಮ ವ್ಯೊನ್ ಅನ್ನು ಕೂಡ ನಾವು ಹೇಳಬೇಕಾಗಿದೆ. ನಮಗೆ ಅವಕಾಶ ಕೊಡಿ.

ಅಧ್ಯಕ್ಷರು: ನಿಮಗೆ ಅವಕಾಶ ಕೊಟ್ಟಿದ್ದೇನಲ್ರಿ, ಮತ್ತೆ ಇದರಲ್ಲಿ ಕಾಲ ಕಳೆಯುವುದು ಬೇಡ.

ಶ್ರೀ ಆರಗ ಜ್ಞಾನೇಂದ್ರ: ಈಗ ಶೂನ್ಯವೇಳೆ ಅವರದೇ ಬರುತ್ತದೆ, ಕಾಲಿಂಗ್ ಅಟೆನ್‌ಷನ್ ಅವರದೇ ಬರುತ್ತದೆ. ನಿಯಮ 69 ಕೂಡ ಅವರದೇ ಬರುತ್ತದೆ. ನಾವೇನು ಮಾಡುವುದು? ನಾವು ಶಾಸಕರಲ್ಲವೆ? ನಾವು ಮಾತನಾಡುವುದಕ್ಕೆ ಬರುವುದಿಲ್ಲವೆ?

ಅಧ್ಯಕ್ಷರು: ಎಲ್ಲರೂ ಶಾಸಕರೇ ಎಲ್ಲರಿಗೂ ಅವಕಾಶ ಕೊಡುತ್ತಿದ್ದೇನೆ.

ಶ್ರೀ ಅರಗ ಜ್ಞಾನೇಂದ್ರ: ಇಲ್ಲಿ ನಾವು ಬಾಯಿ ಮುಚ್ಚಿಕೊಂಡು ಇರಬೇಕಾ? ನಮ್ಮ ಹಕ್ಕನ್ನು ಏಕೆ ಮೊಟಕು ಮಾಡುತ್ತಿದ್ದೀರಿ? ನಮಗೆ ಶೂನ್ಯ ವೇಳೆಯಲ್ಲಿ ಅವಕಾಶ ಕೊಡುವುದಿಲ್ಲ. ನಾವು ಕೊಟ್ಟಂತಹ ಕಾಲಿಂಗ್ ಅಟನ್‌ಷನ್‌ಗೂ ಅವಕಾಶವಿಲ್ಲ.

(ಗೊಂದಲ)

ಅಧ್ಯಕ್ಷರು: ಈಗ ಬೇರೆ ಬೇರೆ ಗುಂಪಿನ ನಾಯಕರುಗಳೇನಿದ್ದಾರೆ, ಅವರ ಅನುಭವ ಅವರ ಪಕ್ಷದ ಸಿದ್ಧಾಂತಗಳು, ವಿಚಾರಗಳನ್ನು ಹೇಳಬೇಕಾಗುತ್ತದೆ. ಅವರಿಗೂ ಸಹ ಬೇಗ ಮುಗಿಸಬೇಕೆಂದು ಒಂದೇ ಸಮನೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಆಯಿತು ಈಗ ಅವರು 10 ನಿಮಿಷದಲ್ಲಿ ಮುಗಿಸುತ್ತಾರೆ.

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ: ಪ್ರತಿ ಡಿಮ್ಯಾಂಡ್ ಹಾಕಿದಾಗಲ್ಲೂ ಎಲ್ಲರೂ ಕೂಡ ಮಾತನಾಡಬೇಕು. ಆದರೆ ನಾವು ಇಲ್ಲಿ ಇರುವವರು ಹಾಗೆ ಇರಬೇಕು ಎಂದರೆ ಹೇಗೆ?

(ಗೊಂದಲ)

ಅಧ್ಯಕ್ಷರು: ಈಗ ಎಲ್ಲರೂ ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು: ದಯಮಾಡಿ ಮಾನ್ಯ ಮಾಧುಸ್ವಾಮಿಯವರೇ ಕುಳಿತುಕೊಳ್ಳಿ. ಈಗ ದಯಮಾಡಿ ಕೇಳಿ. ಈಗ 27 ಇಲಾಖಾ ಬೇಡಿಕೆಗಳಲ್ಲಿ ಎಂಟು ಬೇಡಿಕೆಗಳು ಇದರಲ್ಲಿ ಸೇರಿದ್ದು, ಇನ್ನು 19 ಬೇಡಿಕೆಗಳು ಇದೆ. ದಿನಾಂಕ 28ನೇ ತಾರೀಖಿನಂದು ಎಲ್ಲವನ್ನು ಮುಗಿಸಬೇಕಾಗುತ್ತದೆ. ಆದ್ದರಿಂದ ಬೇರೆ ಬೇರೆ ಯವರಿಗೂ ಕೂಡ ಎಲ್ಲಾ ಕಡೆ ಅವಕಾಶ ಸಿಗುತ್ತದೆ. ಈಗ ನಮ್ಮಲ್ಲಿ ಬೇರೆ ಬೇರೆ ಪ್ರತಿ ಪಕ್ಷಗಳ ಮುಖಂಡರುಗಳು ಏನು ಇದ್ದಾರೆ. ಅವರುಗಳೂ ಸಹ ಸಮಯವನ್ನು ನಿಗದಿ ಮಾಡಿಕೊಂಡು ಮಾತನಾಡಬೇಕಾಗುತ್ತದೆ. ಆದುದರಿಂದ ದಯಮಾಡಿ ನೀವು ಎಷ್ಟು ಜನರು ಮಾತನಾಡಬೇಕು? ನಾವು ಬೆಳಿಗ್ಗೆ 9 ಗಂಟೆಯಿಂದ ರಾತ್ರಿ 9 ಗಂಟೆಯವರೆಗೂ ಸದನವನ್ನು ನಡೆಸೋಣ. ನಾವು ಕುಳಿತುಕೊಳ್ಳುವುದಕ್ಕೆ ಸಿದ್ದರಿದ್ದೇವೆ. ತಾವು ಸಹಕರಿಸಿ. ಸದನವು 12 ಗಂಟೆಗಳ ಕಾಲ ನಡೆದರೆ ಎಲ್ಲರಿಗೂ ಮಾತನಾಡಲು ಅವಕಾಶ ಸಿಗುತ್ತದೆ.

ಶ್ರೀ ಅರಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ನಾವು ನಮ್ಮ ಪಕ್ಷದಲ್ಲಿ ಹಂಚಿಕೊಂಡಿದ್ದೇವೆ. ಕಳೆದ ಸಾರಿ ಯಾರೂ ಮಾತನಾಡಿದ್ದಾರೆ, ಅವರು ಯಾರೂ ಈ ಸಾರಿ ಮಾತನಾಡುವುದಿಲ್ಲ. ಆ ರೀತಿಯಲ್ಲಿ ನಾವು ಹಂಚಿಕೊಂಡಿದ್ದೇವೆ. ಆದರೆ ಕೆಲವರು ಎಲ್ಲಾ ಬೇಡಿಕೆಗಳ ಮೇಲೂ ಅವರೇ ಮಾತನಾಡುತ್ತಾರೆ. ಆ ರೀತಿ ಮಾಡಿದರೆ ನಾವು ಏನು ಮಾಡುವುದು? ಎಲ್ಲಾ ವಿಷಯಗಳ ಮೇಲೂ ಒಬ್ಬೊಬ್ಬರೇ ಮಾತನಾಡುವುದಾದರೆ ಹೇಗೆ? ನಮಗೂ ಮಾತನಾಡಲು ಅವಕಾಶವನ್ನು ಕೊಡಿ. ನಮ್ಮ ಇಷ್ಟು ಜನಕ್ಕೂ ಅವಕಾಶವನ್ನು ಕೊಡಿ. ಇಲ್ಲದಿದ್ದರೆ ನಾವು ಪ್ರತಿಭಟನೆಯನ್ನು ಮಾಡಬೇಕಾಗುತ್ತದೆ. ಇಲ್ಲಿ ನಮಗೆ ಮಾತ್ರ ಟೈಮ್ ಅನ್ನು ಫಿಕ್ಸ್ ಮಾಡುತ್ತೀರಿ. ಇನ್ನು ಉಳಿದವರಿಗೆ ಯಾರಿಗೂ ಟೈಮ್ ಅನ್ನು ಫಿಕ್ಸ್ ಮಾಡುವುದಿಲ್ಲ. ಇಲ್ಲಿ ನಮ್ಮ ಪರಿಸ್ಥಿತಿಗಳು ಏನು?

ಅಧ್ಯಕ್ಷರು: ಈಗ ನಾನು ಎಷ್ಟು ಬಾರಿ ವಿವರವಾಗಿ ಹೇಳಿದರೂ ಕೂಡ ಮತ್ತೆ ಮತ್ತೆ ಗಲಾಟೆಯನ್ನು ಮಾಡಿದರೆ ಏನು ಮಾಡುವುದು ಹೇಳಿ?

ಶ್ರೀ ಅರಗಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ಯಾರದು ಗಲಾಟೆ, ನೀವು ಅವರಿಗೆ ಇಲ್ಡ್ ಆಗಬಾರದು. ನೀವು ನಮ್ಮ ಹಕ್ಕನ್ನು ಮೊಟಕು ಮಾಡುತ್ತಿದ್ದೀರಿ.

ಅಧ್ಯಕ್ಷರು: ಮಾನ್ಯ ಅರಗಜ್ಞಾನೇಂದ್ರರವರೇ, ತಾವು ಸ್ವಲ್ಪ ಅರ್ಥ ಮಾಡಿಕೊಳ್ಳಿ. ಲೋಕಸಭೆಯಲ್ಲೂ ಈ ಸಂಪ್ರದಾಯವಿದೆ. ಈಗ ಒಬ್ಬರು, ಇಬ್ಬರು ಇರುವಂತಹ ಪ್ರಿಪಕ್ಷದ ಸದಸ್ಯರಿಗೂ ಸಹ ಮಾತನಾಡಲು ಅವಕಾಶವನ್ನು ಕೊಡುವಂತಹ ಸಂಪ್ರದಾಯ ಬಂದಿದೆ.

ಶ್ರೀ ಕಟ್ಟಾ ಸುಬ್ರಮಣ್ಯನಾಯ್ಡು: ಮಾನ್ಯ ಅಧ್ಯಕ್ಷರೇ, ಯಾರು ಯಾರಿಗೆ ಎಷ್ಟೆಷ್ಟು ಸಮಯವೆಂದು ತಾವು ನಿಗದಿ ಮಾಡಿ ಬಿಡಿ.

ಅಧ್ಯಕ್ಷರು: ಮಾನ್ಯ ಸುಬ್ರಮಣ್ಯನಾಯ್ಡುರವರೆ, ನಾನು ಹೇಳುವಂಥಾದ್ದು, ಅವರೂ ಸಹ ಅರ್ಥಮಾಡಿಕೊಂಡು ಕಡಿಮೆ ಕಾಲಾವಕಾಶದಲ್ಲಿ ಮಾತನಾಡಬೇಕೆಂದು ಮೊದಲಿನಿಂದಲೂ ಹೇಳುತ್ತಿದ್ದೇವೆ. ನಾನು ಎಲ್ಲರಿಗೂ ಅವಕಾಶವನ್ನು ಕೊಡಲು ಪ್ರಯತ್ನವನ್ನು ಮಾಡುತ್ತಿದ್ದೇನೆ.

ಶ್ರೀ ಕಟ್ಟಾ ಸುಬ್ರಮಣ್ಯನಾಯ್ಡು: ಮಾನ್ಯ ಅಧ್ಯಕ್ಷರೆ, ತಾವು ಯಾರಿಗೆ ಎಷ್ಟು ಸಮಯ ಎಂದು ನಿಗದಿ ಮಾಡಿಬಿಡಿ, ನಾವು ಬೇಡವೆಂದು ಹೇಳಿಲ್ಲ.

ಅಧ್ಯಕ್ಷರು: ಆಯಿತು, ರಾತ್ರಿ 9 ಗಂಟೆಯವರೆಗೂ ಬೇಕಾದರೆ ಮಾತನಾಡೋಣ. ಈಗ ಮಾನ್ಯ ಜಿ.ವಿ.ಶ್ರೀರಾಮರೆಡ್ಡಿಯವರು 10 ನಿಮಿಷ ಮಾತನಾಡಲಿ.

ಶ್ರೀ ಅರಗಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ನಾವು ಹೊರಗಡೆ ಹೋಗುತ್ತೇವೆ. ನಮಗೆ ಅವಕಾಶವನ್ನು ಕೊಡದಿದ್ದರೆ ಹೋಗುತ್ತೇವೆ.

ಅಧ್ಯಕ್ಷರು: ಅವಕಾಶವನ್ನು ಬೇಕಾದಷ್ಟು ಕೊಡುತ್ತೇನೆ.

ಶ್ರೀ ಅರಗಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ನಾವೂ ಅಧ್ಯಯನ ಮಾಡಿಕೊಂಡು ಬರುತ್ತೇವೆ. ಅವರಷ್ಟೇ ಚೆನ್ನಾಗಿ ಮಾತನಾಡುತ್ತೇವೆ.

(ಗೊಂದಲ)

ಶ್ರೀ ಕೆ.ಶ್ರೀನಿವಾಸಗೌಡ (ಕೃಷಿ ಸಚಿವರು): ಮಾನ್ಯ ಅಧ್ಯಕ್ಷರೆ, ನಮ್ಮ ರೂಲಿಂಗ್ ಪಾರ್ಟಿಯಲ್ಲೂ 130 ಜನರು ಇದ್ದಾರೆ. ಅವರನ್ನು ಲೆಕ್ಕ ಹಾಕುವುದಾದರೆ ನಮ್ಮಲ್ಲೂ ಲೆಕ್ಕ ಹಾಕಿ. ನಮ್ಮಲ್ಲೂ ಬಹಳ ಜನರು ಗೆದ್ದಿದ್ದಾರೆ. ಅವರೂ ಸಹ ಮಾತನಾಡುತ್ತಾರೆ. ಇಲ್ಲಿ ಅವರು 79 ಜನರೆಂದು ಹೇಳುವಾಗ, ನಾವು 130 ಜನರು ಗೆದ್ದಿದ್ದಾರೆ. ನಮ್ಮವರಿಗೂ ಅವಕಾಶವನ್ನು ಕೊಡಬೇಕಾಗುತ್ತದೆ. ನೀವು ಆ ರೀತಿ ಯಾರ್ಡ್‌ಸ್ಟಿಕ್ ಹೇಳುವುದಾದರೆ, ಅವರಿಗೆ ಎಷ್ಟು ಕಾಲಾವಕಾಶವನ್ನು ಕೊಡುತ್ತಿರೋ, ಅದೇ ರೀತಿಯಲ್ಲೂ ರೂಲಿಂಗ್ ಪಾರ್ಟಿಯವರಿಗೂ ಕೂಡ ಕೊಡಬೇಕು. ನಮ್ಮಲ್ಲೂ ಕೂಡ ಬಹಳ ಜನ

ಸದಸ್ಯರು ಹೊಸಬರು ಬಂದಿದ್ದಾರೆ. ಅವರು ಮಾತನಾಡುತ್ತಾರೆ. ಅವರಿಗೂ ಮಾತನಾಡಲು ಅವಕಾಶವನ್ನು ಕೊಡಿ. ನೀವು ಅವಕಾಶವನ್ನು ಕೊಡಿ ಮಾತನಾಡುತ್ತಾರೆ.

ಅಧ್ಯಕ್ಷರು: ಆಯಿತು, ಇದೇ ವಿಷಯವನ್ನು 10 ನಿಮಿಷಗಳ ಕಾಲ ಗಳಾಟೆಯಲ್ಲಿ ಕಳೆದುಬಿಟ್ಟಿದ್ದೀರಿ. ಈಗ ಮಾನ್ಯ ಜಿ.ವಿ.ಶ್ರೀರಾಮರೆಡ್ಡಿಯವರೇ ಮಾತನಾಡಿ ದಯಮಾಡಿ 10 ನಿಮಿಷಗಳಲ್ಲಿ ಭಾಷಣವನ್ನು ಮುಗಿಸಿ, ತಾವು ಸೆಂಟಿಮೆಂಟ್ ಆಫ್ ದಿ ಹೌಸ್ ಅರ್ಥಮಾಡಿಕೊಂಡು ಬೇಗ ಮುಗಿಸಬೇಕು.

(ಗೊಂದಲ)

ಶ್ರೀ ಆರ್.ವಿ.ದೇಶಪಾಂಡೆ (ಸಹಕಾರ ಸಚಿವರು): ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಅನುಮತಿಯನ್ನು ಪಡೆದುಕೊಂಡು ಮೇಲ್ಮನೆಯಲ್ಲಿ ಪ್ರಶ್ನೋತ್ತರವಿದೆ. ಅದನ್ನು ಮುಗಿಸಿಕೊಂಡು ಬರುತ್ತೇನೆ.

ಅಧ್ಯಕ್ಷರು: ಆಯಿತು ಹೋಗಿ ಬನ್ನಿ.

ಶ್ರೀ ಆರ್.ವಿ.ದೇಶಪಾಂಡೆ: ಮಾನ್ಯ ಅಧ್ಯಕ್ಷರೆ, ಇಂತಹ ಪಕ್ಷದ ನಾಯಕರಿಗೆ ಇಷ್ಟು ಟೈಮ್ ಕೊಟ್ಟಿದ್ದೇವೆಂದು ಅದನ್ನು ನಿಗದಿ ಮಾಡಿದ್ದೀರಿ. ಟೈಮ್ ಕೊಡಬೇಕು ಎಷ್ಟು ಟೈಮ್‌ನಲ್ಲಿ ಮುಗಿಸಬೇಕೆಂಬುದನ್ನು ಈಗಾಗಲೇ ತಾವು ಅದರ ಬಗ್ಗೆ ನಿರ್ಣಯವನ್ನು ಮಾಡಿದ್ದೀರಿ. ಇಲ್ಲಿ ಎಲ್ಲರೂ ನಿಂತುಕೊಂಡು ಒಂದೇ ಸಾರಿ ಮಾತನಾಡಿದರೆ, ಈ ಸದನದಲ್ಲಿ ಯಾರು ಏನು ಮಾತನಾಡುತ್ತಾರೆ ಎಂಬುದು ಗೊತ್ತಾಗುವುದಿಲ್ಲ. ಅವರ ನಾಯಕರು ಏನು ತೀರ್ಮಾನವನ್ನು ಮಾಡುತ್ತಾರೆಂಬುದು ಗೊತ್ತುಮಾಡಿಕೊಂಡು ಮಾತನಾಡಿ, ಅವರಿಗೆ ಟೈಮ್ ಜಾಸ್ತಿ ಕೊಡಿ. ನಮಗೆ ಕಡಿಮೆ ಟೈಮ್ ಕೊಡಿ, ನಾವು ಬೇಡವೆನ್ನುವುದಿಲ್ಲ. ಆದರೆ ಒಂದೇ ಸಾರಿ ಎಲ್ಲರೂ ಎಂದು ನಿಂತು ಮಾತನಾಡಿದರೆ ಇದು ಏನು ಸಂತೆನೋ ವಿಧಾನಸಭೆಯೋ, ಇದಕ್ಕೆ ಮಾನ್ಯತೆ ಇಲ್ಲವೋ ಹೇಗೆ? ಸದನ ಸರಿಯಾಗಿ ಶಿಸ್ತಿನಲ್ಲಿ ನಡೆಯಬೇಕು. ಅವರು ಭಾಷಣವನ್ನು ಮಾಡಲಿ, ಅದು ರಾಜ್ಯದ ಜನತೆಗೂ ಗೊತ್ತಾಗಲಿ. ಎಲ್ಲಾ ಟೈಮ್‌ನಲ್ಲೂ ವಿರೋಧಪಕ್ಷದ ನಾಯಕರು ಮಾತನಾಡುವಾಗ ಅವರ ಹಿಂದೆ ಇರತಕ್ಕ ಎಲ್ಲಾ ಸದಸ್ಯರುಗಳು ಏಕೆ ಕಾಲದಲ್ಲಿ ಮಾತನಾಡುವುದು. ನಮ್ಮ ನಾಯಕರು ಮಾತನಾಡುವಾಗ ನಾವು ನಿಂತು ಮಾತನಾಡುವುದು ಇದೆಲ್ಲಾ ಸರಿಯಲ್ಲ. ದಯಮಾಡಿ ಸದನ ಶಿಸ್ತಿನಿಂದ ನಡೆಯುವಂಥಾದ್ದಕ್ಕೆ ಅವಕಾಶ ಮಾಡಿಕೊಡಬೇಕೆಂದು, ನಾನು ಎಲ್ಲಾ ನಾಯಕರುಗಳಿಗೂ ಕೈಮುಗಿದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಇಲ್ಲಿ ಪೈಪೋಟಿ ಅವರು ಯಾರು, ಇವರು ಯಾರು ಎಂಬ ಪಕ್ಷ ಭೇದಭಾವನೆ ಇಲ್ಲ. ಇಲ್ಲಿ ಇಂದು ಅಧಿಕೃತ ವಿರೋಧಪಕ್ಷದಲ್ಲಿ 79 ಜನ ಸದಸ್ಯರು ಇರುವ ಸಂದರ್ಭದಲ್ಲಿ, ತಾವು ನಮ್ಮ ಉಳಿದಂತಹ ಎಲ್ಲಾ ಬೇರೆ ಪಕ್ಷದ ಸದಸ್ಯರಿಗೂ ಸಮಯವನ್ನು ಸ್ವಲ್ಪ ಜಾಸ್ತಿ ಕೊಡಿ. ಅದಕ್ಕೆ ನಮ್ಮದು ಏನೂ ಅಭ್ಯತರವಿಲ್ಲ. ಇಲ್ಲಿ ಪ್ರಶ್ನೆ ಇರುವಂಥಾದ್ದು, ಅನೇಕ ಸದಸ್ಯರುಗಳು ಹೊಸದಾಗಿ ಆಯ್ಕೆಯಾಗಿ ಬಂದಿರುವುದರಿಂದ ಡಿಮಾಂಡ್ಸ್ ಸಂದರ್ಭದಲ್ಲೂ ಆದರೂ ಅವರಿಗೆ ಮಾತನಾಡಲು ಅವಕಾಶ ಕೊಡಿ. ಈಗ ತಾವು ದೊಡ್ಡ ಮನಸ್ಸು ಮಾಡಿ ಅಧಿವೇಶನವನ್ನು ಮುಂದಿನ ತಿಂಗಳ 5 ರವರೆಗೂ ನಡೆಸಲು ತೀರ್ಮಾನಿಸಿದ್ದೀರಿ. ದೊಡ್ಡ ಪ್ರಮಾಣದಲ್ಲಿ ನಾವು ಸದನದಲ್ಲಿ ಸೇರುತ್ತಿದ್ದೇವೆ. ಆದುದರಿಂದ ಇಲ್ಲಿ ಅನಿವಾರ್ಯವಾದಾಗ ಧರಣಿ, ಸತ್ಯಾಗ್ರಹ, ಪ್ರಜಾತಂತ್ರ, ವ್ಯವಸ್ಥೆಯಲ್ಲಿ ಸ್ವಾಭಾವಿಕವಾಗಿ ಇರುವಂಥಾದ್ದು. ಅವರು ಹೇಳಿದಂತೆ ಸಭಾ ನಾಯಕರು ಮತ್ತು ನಾವು ಯಾರಾದರೂ ನಿಂತಾಗ ಸಹಕಾರವನ್ನು ಕೊಡುವಂಥಾದ್ದು, ಇಲ್ಲಿರುವಂತಹ ಪ್ರತಿಯೊಬ್ಬ ಸದಸ್ಯರಿಗೂ 10 ನಿಮಿಷ ಮಾತನಾಡುವುದಕ್ಕೆ ಸಮಯ ಕೊಡಿ. ಅವರು ಭಾವನೆಗಳನ್ನು, ವಿಚಾರಗಳನ್ನು ವ್ಯಕ್ತಪಡಿಸುವಂಥಾದ್ದಕ್ಕೆ ಈ ಬೇಡಿಕೆಗಳ ಮೇಲೆ ಮಾತನಾಡುವಾಗ ಸಾಧ್ಯವಾಗುತ್ತದೆ. ಬೇರೆ ಯಾವುದರಲ್ಲೂ ಆಗುವುದಿಲ್ಲ. ನೀವು ಮ್ಯಾಗ್ನಿಮಮ್ ಅವಕಾಶವನ್ನು ಕೊಡುತ್ತಿದ್ದೀರಿ. ಆದರೆ ಈಗ ಸಮಯವನ್ನು ನಿಗದಿ ಮಾಡಿ, ಬೇಕಾದರೆ ಸಮಯವನ್ನು ಸ್ವಲ್ಪ ಹೆಚ್ಚಿಗೆ ಕೊಡಿ. ಅದನ್ನು ಹಂಚಿ ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ನಾನು 10 ನಿಮಿಷಗಳೆಂದು ಹೇಳುತ್ತೇನೆ. ಅದನ್ನು ಅವರು ಅರ್ಥ ಮಾಡಿಕೊಳ್ಳಬೇಕು. ಆ 10 ನಿಮಿಷದಲ್ಲಿ ಭಾಷಣವನ್ನು ಮುಗಿಸಿದರೆ ಸರಿ. ಅದನ್ನೇ ಅರ್ಧ ಗಂಟೆಗೆ, ಮುಕ್ಕಾಲು ಗಂಟೆಗಳವರೆಗೂ ಮಾತನಾಡುತ್ತಾರೆ. ನಾವು ಎಷ್ಟು ಬೆಲ್ ಹೊಡೆದರೂ ಕೇಳುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ನಾವು ಬೆಳಿಗ್ಗೆ 10 ಗಂಟೆಗೆ ಬಂದರೆ ರಾತ್ರಿ 8 ಗಂಟೆಯವರೆಗೂ ಇಲ್ಲಿ ಕುಳಿತುಕೊಳ್ಳುವುದಿಲ್ಲವೇ? ಈಗ ಇಲ್ಲಿ ಆಡಳಿತ ಪಕ್ಷದವರು ಎಷ್ಟು ಜನ ಇದ್ದಾರೆ ಅದಕ್ಕೆ ಡಬ್ಬಲ್ ಆಗಿ ಇಲ್ಲಿ ನಾವು ಕುಳಿತಿದ್ದೇವೆ. ಅದು ಏಕೆ? ನಾವು ಸದನದಲ್ಲಿ ಭಾಗವಹಿಸಬೇಕೆಂಬ ಕಳಕಳಿ ನಮ್ಮಲ್ಲಿ ಇದೆ. ಆದುದರಿಂದ ನಾವು ಅವರ ಬಗ್ಗೆ ಟೀಕೆ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಇಲ್ಲಿ ಅವರು ಯಾರು ಇರುತ್ತಾರೆ. ಯಾರೂ ಇರುವುದಿಲ್ಲವೆಂಬ ಬಗ್ಗೆ ಟೀಕೆ ಮಾಡುವುದಿಲ್ಲ. ಆದರೆ ಇಲ್ಲಿ ಎಲ್ಲರಿಗೂ

ಸಮಯ ಹಂಚಿಕೊಟ್ಟು, ಎಲ್ಲರಿಗೂ ಅವಕಾಶ ಸಿಗಬೇಕು. ದಯಮಾಡಿ ಎಲ್ಲರಿಗೂ ಅವಕಾಶವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಆಯಿತು ಎಲ್ಲರು ಇದನ್ನು ಅರ್ಥಮಾಡಿಕೊಂಡು, ನಿಗದಿತ ಸಮಯದಲ್ಲಿ ಭಾಷಣವನ್ನು ಮುಗಿಸಬೇಕು. ಈಗ ಮಾನ್ಯ ಶ್ರೀರಾಮರೆಡ್ಡಿಯವರೇ, ದಯಮಾಡಿ ತಾವು 10 ನಿಮಿಷದಲ್ಲಿ ತಮ್ಮ ಭಾಷಣವನ್ನು ಮುಗಿಸಬೇಕು. ನಾನು ಎರಡನೆಯ ಬೆಲ್ ಹೊಡೆದು ತಕ್ಷಣ ಕುಳಿತುಕೊಳ್ಳಬೇಕು. ಆ ರೀತಿ ಮಾಡದಿದ್ದರೆ ಅವಕಾಶವನ್ನು ಕೊಡುವುದಿಲ್ಲ. ಮತ್ತೆ ರೆಕಾರ್ಡ್‌ಗೂ ಹೊಗುವುದಿಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಅಧ್ಯಕ್ಷರೆ, ನಾನು ಕೈಗಾರಿಕೆಗಳ ಬಗ್ಗೆ ಕೆಲವು ವಿಚಾರಗಳನ್ನು ಹೇಳಲಿಚ್ಚಿಸುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವಂಥಾದ್ದಕ್ಕೆ ಎರಡು ಪ್ರಮುಖವಾದ ಉದ್ದೇಶಗಳು ಇವೆ. ಮೊದಲನೆಯದು ಸರಕುಗಳನ್ನು ಉತ್ಪಾದನೆ ಮಾಡುವಂಥಾದ್ದು, ಮತ್ತು ಅದರಿಂದ ರಾಜ್ಯದ ಆದಾಯವನ್ನು ಹೆಚ್ಚಿಸುವಂಥಾದ್ದು, ಎರಡನೆಯದು ಉದ್ಯೋಗಾವಕಾಶವನ್ನು ಸೃಷ್ಟಿ ಮಾಡುವಂಥಾದ್ದು, ಈ ಎರಡು ಉದ್ದೇಶದಿಂದ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವಂಥಾದ್ದು, ಯಾವುದೇ ಒಂದು ರಾಜ್ಯದ ಮತ್ತು ದೇಶದ ಜವಾಬ್ದಾರಿಯಾಗಿದೆ. ಆದರೆ ಕರ್ನಾಟಕ ರಾಜ್ಯದ ಕೈಗಾರಿಕೆಗಳ ಉತ್ಪನ್ನಗಳ ಪರಿಸ್ಥಿತಿ, ಕೇಂದ್ರ ಸರ್ಕಾರದ ಸ್ವಾಮ್ಯದಲ್ಲಿರುವಂತಹ ಕೈಗಾರಿಕೆಗಳನ್ನು ಒಟ್ಟು ರಾಜ್ಯ ಸರ್ಕಾರದ ಸ್ವಾಮ್ಯದಲ್ಲಿರುವಂತಹ ಸಣ್ಣ ಮತ್ತು ಮಧ್ಯಮ ಕಾರ್ಖಾನೆಗಳು ಉತ್ಪಾದನೆಯನ್ನು ಎಷ್ಟರಮಟ್ಟಿಗೆ ಮಾಡಿದೆ. ಯಾವ್ಯಾವ ಉತ್ಪಾದನೆಯನ್ನು ಎಷ್ಟು ಮಾಡಿದೆ. ಅದು ನಮ್ಮ ರಾಜ್ಯದ ಅವಶ್ಯಕತೆಗೆ ಅನುಗುಣವಾಗಿ ಇದೆಯಾ? ಯಾವ ಯಾವ ವಸ್ತುಗಳನ್ನು ಎಷ್ಟೆಷ್ಟು ಉತ್ಪಾದನೆ ಮಾಡಿದ್ದಾರೆಂಬ ಬಗ್ಗೆ ಯಾವುದೇ ರೀತಿಯಾದಂತಹ ಮಾಹಿತಿ ಇಲ್ಲ. ಇನ್ನೊಂದು ಕಡೆ ಕೈಗಾರಿಕೆಗಳ ಮುಖ್ಯ ಉದ್ದೇಶ ಉದ್ಯೋಗಗಳನ್ನು ಸೃಷ್ಟಿ ಮಾಡುವಂಥಾದ್ದು. ಆದರೆ ಕರ್ನಾಟಕ ರಾಜ್ಯದಲ್ಲಿ ಕಳೆದ 10 ವರ್ಷದಲ್ಲಿ ಉದ್ಯೋಗಾವಕಾಶ ಸತತವಾಗಿ ಕಡಿಮೆಯಾಗುತ್ತಿದೆ. ಉದ್ಯೋಗಾವಕಾಶ ಹೆಚ್ಚು ಆಗಲಿಲ್ಲ. ಇನ್ನೊಂದು ಕಡೆ ಸರ್ಕಾರ ಹೇಳುವುದೇನೆಂದರೆ ಸಾವಿರಾರು ಕೋಟಿ ರೂಪಾಯಿಗಳನ್ನು ಬಂಡವಾಳವಾಗಿ ಹಾಕುತ್ತಿದ್ದೇವೆ. ಉತ್ಪಾದನೆಯನ್ನು ಹೆಚ್ಚು ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಇದರಲ್ಲಿ ಒಂದು ಪಟ್ಟಿಯನ್ನು ಕೊಟ್ಟಿದ್ದಾರೆ. Mega Projects cleared by the State Level Committee during the year 2004-05. ಮಾನ್ಯ ಸಿಂಧ್ಯಾರವರೆ, ತಾವು ನೋಟ್ ಮಾಡಿಕೊಳ್ಳಬೇಕು. ಇದರಲ್ಲಿ ಒಂದು